ಬಿ. ಚಂದ್ರೇಗೌಡ, ಬೆಂಗಳೂರು
ಇಂಗು ತಿಂದ ಮಂಗ ಹೇಗಿರುತ್ತದೆ?



ಚುನಾವಣೆ ಸೋತ ಮಂತ್ರಿಯಂತೆ.

ಕುಮಾರ್ ಚಲವಾದಿ, ಹಾಸನ
ನೀವು ಸಾವಿರಾರು ಓದುಗರ ಪ್ರಶ್ನೆಗೆ ಸಮಾಧಾನದಿಂದ ಉತ್ತರಿಸುತ್ತೀರಿ. ನನ್ನಾಕೆಗೆ ಒಂದು ಪ್ರಶ್ನೆ ಕೇಳಿದರೂ ಸಿಟ್ಟಾಗುವಳಲ್ಲಾ...?
ಪ್ರಶ್ನೆ ಪ್ರಶ್ನೆಯಂತಿರದೆ ತನಿಖೆಯಂತೆ ಇರುವುದೇ ಸಿಟ್ಟಿಗೆ ಕಾರಣವಂತೆ.

ಫಾಲನೇತ್ರ ಸಜ್ಜನ, ಶಿರಸಿ
ದುಡ್ಡೇ ದೊಡ್ಡಪ್ಪ. ವಿದ್ಯೆ ಅದರಪ್ಪ. ಹಾಗಾದರೆ ಅಮ್ಮ?
ಶ್ರಮ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
ನಾವು ಬೆಳೆಯಲು ಶಿಕ್ಷಕರ ಅವಶ್ಯಕತೆ ಇದೆಯೆ?
ಮಾನವನಾಗಿಯೋ, ಪ್ರಾಣಿಯಾಗಿಯೋ? ಪ್ರಾಣಿಯಂತಾದರೆ ಬೇಕಾಗಿಲ್ಲ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಪಕ್ಷಿಗಳು ಕಪ್ಪಗೆ ಇದ್ದರೂ ಅವುಗಳ ಮೊಟ್ಟೆಗಳೇಕೆ ಬೆಳ್ಳಗೆ ಇರುತ್ತವೆ?



ಸೂರ್ಯನ ಕಿರಣಗಳು ಗರ್ಭದೊಳಕ್ಕೆ ಹೋಗುವುದಿಲ್ಲವಾದ್ದರಿಂದ.

ಪಿ. ಜಯವಂತ ಪೈ, ಕುಂದಾಪುರ
ಪೊಲೀಸ್ ಕಸ್ಟಡಿಗೂ, ಹೆಂಡತಿಯ ಕಸ್ಟಡಿಗೂ ವ್ಯತ್ಯಾಸವೇನು?
ಎರಡೂ ಕಡೆ ದೊರೆಯುವ ಕಜ್ಜಾಯದ ರೀತಿ, ರುಚಿಗಳೇ ಬೇರೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಓದುವವರಿಗೆ ಪ್ರಶ್ನೆಪತ್ರಿಕೆ. ಮದುವೆ ಆಗುವವರಿಗೆ ಲಗ್ನಪತ್ರಿಕೆ. ಮಂತ್ರಿ ಆಗುವವರಿಗೆ?
ಎಲ್ಲೋ ಜರ್ನಲಿಸ್ಟ್‌ಗಳ ವಿಘ್ನಪತ್ರಿಕೆ.

ನರಸಿಂಹ ಪೈ, ಹೊನ್ನಾವರ
ನಗುವಾಗ ನೂರು ಸ್ವರ. ಅಳುವಾಗ ಒಂದೇ ಸ್ವರ. ಏಕೆ?
ಕೊರಳಿನ ಸ್ವರಗಳು ನೂರಾರು; ಕರುಳಿನದು ಒಂದೇ.

ವಿಜಯಕುಮಾರ್ ಎಚ್.ಕೆ. ರಾಯಚೂರು
ಇತ್ತೀಚೆಗೆ ಪೊಲೀಸರೇ ಧೃತಿಗೆಟ್ಟು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಏಕೆ ರಾಮ್?
ನಿಷ್ಠುರ ಕೊರಳಿಗೆ ಭ್ರಷ್ಟರ ಅಧಿಕಾರ ಕುಣಿಕೆ ಆಗುವುದರಿಂದ.

ಸೂರ್ಯಪ್ರಕಾಶ, ಹಾಸನ
'ಹಿತಶತ್ರು' ಅಂತಾರಲ್ಲ, ಶತ್ರುವಿನಿಂದ ಹಿತವೆಲ್ಲಿಂದ?
ಮಧುಮೇಹಿಗೆ ಸಿಹಿ ಕೊಡಿಸಿದಾಗ ತಿನ್ನುವಾಗ ಹಿತ ಇರುತ್ತದಲ್ಲ.

ಜ್ಯೋತ್ನಾ, ಕಡಬ
ಹಣಕ್ಕೆ ಎಕ್ಸ್‌ಪೈರಿ ಡೇಟ್ ಇರುತ್ತಿದ್ದರೆ ಜನರೇನು ಮಾಡುತ್ತಿದ್ದರು?
ಆ ಡೇಟ್ ಅಳಿಸಿ ಮತ್ತೊಂದು ಡೇಟ್ ಮುದ್ರಿಸುವ ಕಳ್ಳದಾರಿಯನ್ನು ಕಂಡುಹಿಡಿಯುತ್ತಿದ್ದರು.

ಶಿವಮೊಗ್ಗ ರಮೇಶ್, ಮೈಸೂರು
ಎಲ್ಲರೂ ಮುಂದುವರಿಯಬಯಸುವ ಈ ಕಾಲದಲ್ಲೂ ಹಿಂದುಳಿದ ವರ್ಗಕ್ಕೆ ಸೇರಿಸಲು ಗೋಗರೆಯುವುದೇಕೆ?
ಸೊಂಟ ಭದ್ರವಿದ್ದರೂ ಗೋಡೆಗೊರಗಿ ನಿಲ್ಲುವುದು ಕೆಲವರ ಜಾಯಮಾನ.

ವಾಣಿ ವಿ. ಬೆಂಗಳೂರು
ಈಗಿನ ಯುವಕರು ಪ್ರೈವೆಸಿ ಪಾಲಿಸಿಯನ್ನು ಅನುಸರಿಸುತ್ತಾರೆ. ಏಕೆ?
ಸುದ್ದಿಹದ್ದುಗಳು ಹಗ್ಗವನ್ನು ಹಾವಾಗಿಸುವುದರಿಂದ.

ಬೂಕನಕೆರೆ ವಿಜೇಂದ್ರ, ಮೈಸೂರು
ಕೆಲವರಿಗೆ ವಯಸ್ಸಾದ ಮೇಲೆಯೇ ಆಸೆ ಹೆಚ್ಚಾಗುತ್ತಿದೆಯಲ್ಲಾ...?
ಕಡೆಕಡೆಯ ಓವರ್‌ಗಳಲ್ಲಿ ಸಾಕಷ್ಟು ಚಚ್ಚಿಬಿಡಬೇಕೆಂಬ ಟಿ20 ನಿಯಮ.

## ಬಹುಮಾನಿತ ಪ್ರಶ್ನೆ

ಬಿ.ಆರ್. ಉಷಾ, ಬೆಂಗಳೂರು
ಅರ್ಥವೇ ಇಲ್ಲದ ಪ್ರಶ್ನೆಗಳಿಗೆ ಅರ್ಥಪೂರ್ಣ ಉತ್ತರ ಕೊಡುತ್ತೀರ. ಇದರ ರಹಸ್ಯವೇನು?
ಶೂನ್ಯಾರ್ಥ, ಅನರ್ಥದಲ್ಲೂ ನವ್ಯಾರ್ಥ ನೋಡಬೇಕೆಂಬ ಹಂಬಲ.

ಸುಮನಾ, ತೆಲಂಗಾಣ
4 ವರ್ಷದಿಂದ ವಿಶ್ವ ಸಂತೋಷ ಸೂಚ್ಯಂಕದಲ್ಲಿ ಫಿನ್ಲಾಂಡ್‌ಗೆ ಮೊದಲ ಸ್ಥಾನ. ಹಾಗಾದರೆ ಸಂತೋಷ = ಫಿನ್ಲಾಂಡ್ ಎನ್ನಬಹುದೆ?
ಫಿನ್ಲಾಂಡಿನ ಮಂದಿ ಸೂಚ್ಯಂಕ ಘೋಷಕರನ್ನು ಸಂತೋಷದಲ್ಲಿ ತೇಲಿಸುತ್ತಿದ್ದಾರೆ ಎಂದಂತೂ ಹೇಳಬಹುದು.

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ
ಕೋವಿಡ್ ಸೀಸನ್‌ನಲ್ಲಿ ಸಿಸೇರಿಯನ್‌ಗಿಂತ ಸ್ವಾಭಾವಿಕ ಹೆರಿಗೆಗಳೇ ಹೆಚ್ಚು. ಇದು ಹೇಗೆ?
ಸರ್ಜನ್‌ಗಳ ಕೊರತೆ ಇದ್ದುದರಿಂದ ಗರ್ಭಿಣಿಯರೇ ಸ್ವಪ್ರಯತ್ನದಿಂದ ಹೆರಲು ತೀರ್ಮಾನಿಸಿದರಂತೆ.

ಬಾ.ರಂ. ಸುರೇಶ್, ಶಿವಮೊಗ್ಗ
ಹುಡುಗಿಯರು, ಆಂಟಿಯರು ತುಟಿಗೆ ರಂಗು ಹಚ್ಚಿಕೊಳ್ಳುವುದು ಯಾವುದರ ಸಂಕೇತ?



ತಮ್ಮದು ಕಲರ್‌ಫುಲ್ ಪರ್ಸನಾಲಿಟಿ ಎಂಬುದರ ಸಂಕೇತ.

ನಂದಕುಮಾರ್ ಎಚ್.ಎಸ್. ಮಂಗಳೂರು
ಅವಿವಾಹಿತ ಸನ್ಯಾಸಿಗಳೇ ಇತ್ತೀಚೆಗೆ ಮದುವೆಯ ಬಗ್ಗೆ ಬಹಳ ಮಾತನಾಡುತ್ತಿದ್ದಾರಲ್ಲಾ, ಏಕೆ?
ಎಷ್ಟೋ ಬಾರಿ ಸುಪ್ತ ಬಯಕೆಗಳು ಭಾಷಣಗಳಾಗಿ ಮಾರ್ಪಡುತ್ತವಂತೆ.

ಚನ್ನವೀರಯ್ಯ ಹೆಚ್.ಎಂ. ಊರಿಲ್ಲ
ನೀವು ಆಸ್ತಿಕರೋ, ನಾಸ್ತಿಕರೋ?
ದೇವರ ಮೇಲೆ ಆಣೆ ಮಾಡಿ ಹೇಳ್ತಿದ್ದೀನಿ, ನಾನು ನಾಸ್ತಿಕ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in